ಮದುವೆ ಮಂಟಪದಲ್ಲಿ ತಾಳಿ ಕಟ್ಟುವ ಮೊದಲೇ 'ಮಾತುಕೊಟ್ಟಂತೆ 'ಎಚ್.ಎಂ.ಟಿ' ವಾಚು ಕಟ್ಟಬೇಕು. ಇಲ್ಲದಿದ್ದರೆ ತಾಳಿ ಕಟ್ಟಲಾರೆ' ಎಂದು ಮದುಮಗ ಹಟ ಹಿಡಿದಿದ್ದನಂತೆ. ಒಂದು ವಾರದೊಳಗೆ ಖಂಡಿತಾ ಕೊಡುತ್ತೇನೆ ಎಂದು ಹುಡುಗಿಯ ಬಡ ಅಪ್ಪ ಅದೆಷ್ಟೇ ಬಡಬಡಿಸಿದರೂ ಮದುಮಗ ಒಪ್ಪಲಿಲ್ಲವಂತೆ. ಹತಾಶೆ, ಕೋಪದಿಂದ ಸ್ತಿಮಿತ ಕಳಕೊಂಡ ಅಪ್ಪ, ಒಳಗೆ ಹೋಗಿ ಕೊಡಲಿ ತಂದು ಮಗಳ ರುಂಡವನ್ನು ಕತ್ತರಿಸಿ, ಪೊಲೀಸ್ ಸ್ಟೇಶನ್‌ಗೆ ತಂದಿದ್ದರು! ಇಂದಿನ 'ಟೀವಿ'ಯವರಿಗೆ ಒಂದು ವಾರದ ಕಾಲ ಹಗಲೂ ರಾತ್ರಿ 'ಟಿ.ಆರ್.ಪಿ' ಕೊಡಬಲ್ಲ (ಅ)ಯೋಗ್ಯ ಸುದ್ದಿ ಅದು. ಆದರೆ, ನಾನದನ್ನು ಕತೆ ಮಾಡಲಾರೆ...

ಕಳೆದೆರಡು ವಾರಗಳಿಂದ ನನ್ನೊಳಗೆ ಕತೆಯೊಂದು ಕೊರೆಯುತ್ತಿದೆ. 'ವಸ್ತು' ಚುಟುಕಾಗಿ ಇಷ್ಟು:

ಮುತ್ತುಪ್ಪಾಡಿಯ ಹಾಜಿ ಅಬ್ದುಲ್ಲಾರ ಮಗಳು ರುಖಿಯಾ ಶೃಂಗಾರಗೊಂಡು ಕಿಟಕಿಯ ಪಕ್ಕದಲ್ಲಿ ಕುಳಿತು, ಹಿತ್ತಲಲ್ಲಿ ವಿಶೇಷವಾಗಿ ಸಿದ್ಧಪಡಿಸಲಾದ ಒಲೆಗಳಲ್ಲಿ ಬೇಯುತ್ತಿರುವ ಬಿರಿಯಾನಿ ಮತ್ತು ಕುರಿಮಾಂಸದ ಪರಿಮಳವನ್ನು ಹೀರುತ್ತಾ, ಮನೆಯೆದುರಿನ ಚಪ್ಪರದಲ್ಲಿ ಸೇರಿರುವ ಅತಿಥಿಗಳ ನಗು ಕೇಕೆಗಳನ್ನು ಆಲಿಸುತ್ತಿದ್ದಾಳೆ.

ಇನ್ನೊಂದು ಹತ್ತು ನಿಮಿಷಗಳಲ್ಲಿ ಮಸೀದಿಯ ಮೌಲವಿಯವರು ಅವಳ ಬಳಿ ಬಂದು ಮದುವೆಗೆ ಸಮ್ಮತಿ ಕೇಳುವವರಿದ್ದಾರೆ. ರುಖಿಯಾ 'ಕಬೂಲ್ ಹೆ' ಎಂದ ಬಳಿಕವಷ್ಟೇ ಹುಡುಗ ಮತ್ತು ಹುಡುಗಿಯ ಅಪ್ಪನ ನಡುವೆ ನಿಖಾಹದ ಒಪ್ಪಂದ ನಡೆಯಲು ಸಾಧ್ಯ.

ಒಂದು ವೇಳೆ ಆಕೆ 'ಕಬೂಲು ನಹಿ' ಎಂದುಬಿಟ್ಟರೆ ಏನಾಗಬಹುದು? ಕಾಸರಗೋಡಿನಿಂದ ಎರಡು ಸ್ಪೆಷಲ್ ಲಗ್ಸೂರಿ ಬಸ್‌ಗಳಲ್ಲಿ ಬಂದಿರುವ ಹುಡುಗನ ಕಡೆಯವರ ಸ್ಥಿತಿ ಏನಾದೀತು? ಬೇಯಿಸಿದ ಬಿರಿಯಾನಿ, ಮಾಂಸದ ಅಡುಗೆಗಳನ್ನೆಲ್ಲ ಏನು ಮಾಡಬೇಕು?

ಆದ್ದರಿಂದ ಆಕೆ 'ಕಬೂಲ್ ಹೆ' ಎಂದೇ ಹೇಳಬೇಕು.

ರುಖಿಯಾಳ 'ಕಬೂಲ್ ಹೆ' ಎಂಬ ಹೇಳಿಕೆಯ ಅನಿವಾರ್ಯತೆಗೂ, ಮಂದಿರ–ಮಸೀದಿ ವಿವಾದವನ್ನು ನ್ಯಾಯಾಲಯದ ಹೊರಗೆಯೇ ಪರಿಹರಿಸಿಕೊಳ್ಳಿ ಎಂಬ ಸನ್ಮಾನ್ಯ ನ್ಯಾಯಮೂರ್ತಿ ಖೇಹರ್ ಸಾಹೇಬರ ಆದೇಶಕ್ಕೂ ಹತ್ತಿರದ ಸಂಬಂಧವಿದೆ.

ಒಡೆದುಹೋದ ಬಾಬರಿ ಮಸೀದಿ ಜಾಗದಲ್ಲೇ ರಾಮಮಂದಿರ ನಿರ್ಮಿಸುವುದು ಎಂಬುದಾಗಿ ಹಿಂದೂ ಪಕ್ಷದವರು ಟೊಂಕಕಟ್ಟಿ ನಿಂತದ್ದಾಗಿದೆ (ಬಿರಿಯಾನಿ ಬೇಯುತ್ತಿದೆ). 'ಹಿಂದೂಸ್ತಾನದ ನೆಲದಲ್ಲಿ ಎಲ್ಲಿಕೂಡಾ ಬಾಬರಿ ಮಸೀದಿಯನ್ನು ಕಟ್ಟಲು ನಾವು ಬಿಡುವುದಿಲ್ಲ' ಎಂದು ಸನ್ಮಾನ್ಯ ತೊಗಾಡಿಯಾ ಸಾಹೇಬರು ಎಚ್ಚರಿಕೆ ಕೊಟ್ಟೂ ಆಗಿದೆ (ಕುರಿ ಮಾಂಸ ಕೊತಕೊತನೆ ಕುದಿಯುತ್ತಿದೆ). ಎಲ್ಲವೂ ಪೂರ್ವನಿರ್ಧರಿತವಾಗಿದೆ (ಕಾಸರಗೋಡಿನಿಂದ ಎರಡು ಸ್ಪೆಷಲ್ ಲಗ್ಸೂರಿ ಬಸ್‌ಗಳಲ್ಲಿ ಮದುಮಗನ ದಿಬ್ಬಣ ಬಂದದ್ದಾಗಿದೆ). ಆದ್ದರಿಂದ, ನ್ಯಾಯಾಲಯದ ಹೊರಗಿನ ಪಂಚಾತಿಕೆ ಯಶಸ್ವಿಯಾಗಬೇಕಾದರೆ, 'ಅಲ್ಲೇ ಕಟ್ಟುವ' ಹಿಂದೂ ಪಕ್ಷದವರ ನಿರ್ಧಾರಕ್ಕೆ ಮುಸ್ಲಿಮ್ ಪಕ್ಷದವರು (ರುಖಿಯಾ ಹೇಳುವಂತೆ) 'ಕಬೂಲ್ ಹೆ' ಅನ್ನಲೇಬೇಕು.

ಕತೆಯೊಳಗೆ, ಮುಸ್ಲಿಮರಿಂದ 'ಕಬೂಲ್ ಹೆ' ಅಥವಾ 'ಕಬೂಲ್ ನಹಿ' ಎಂದು ಹೇಳಿಸುವುದು ಬಹಳ ಸುಲಭ.

'ಕಬೂಲ್ ನಹಿ' ಎಂದು ಮುಗಿಸಿದ ಈ ಕತೆಯನ್ನು ಇಷ್ಟಪಡುವ ಓದುಗರ ಸಂಖ್ಯೆಗಿಂತ, 'ಕಬೂಲ್ ಹೆ' ಎಂದು ಮುಗಿಸಿದ ಕತೆ ಹೆಚ್ಚು ಜನಪ್ರಿಯವಾಗುತ್ತದೆಂಬುದೂ ನನಗೆ ಗೊತ್ತು. ಒಂದು ಕಾಲದಲ್ಲಿ ಫ್ರಿಜ್, ವಾಷಿಂಗ್ ಮಷಿನ್, ಪ್ರೆಶರ್ ಕುಕ್ಕರುಗಳಿಗೆ **ISI** ಮಾರ್ಕ್ ಇದ್ದರೆ ಅದು